ನಿರೀಕ್ಷಕರು, ಬೆಂಗಳೂರು, ಹುಬ್ಬಳ್ಳಿ, ಬಾಗಲಕೋಟೆ, ಗುಲ್ಬರ್ಗಾ ಹೊನ್ನಾವರ, ಮತ್ತು ಸಾಗರ ಈ ಕಛೇರಿಗಳು ಬಂದರು ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ.

ಆ) ಸಮುದ್ರದಲ್ಲಿ ಚಂಡ ಮಾರುತ ಮತ್ತು ಪ್ರತಿಕೂಲ ಹವಾಮಾನ ಬಗ್ಗೆ ಉಂಟಾಗುವ ತೊಂದರೆಗಳನ್ನು ಕರಾವಳಿಯ ಮೀನುಗಾರರಿಗೂ ಮತ್ತು ನಾವಿಕರಿಗೆ ತಿಳಿಸಲು ಚನ್ನೈ ಮತ್ತು ಬೆಂಗಳೂರಿನ ಹವಾಮಾನ ವರದಿ ಕೇಂದ್ರಗಳಿಂದ ಬಂದರು ಕಛೇರಿಗಳಿಗೆ ಪ್ರಾಪ್ತವಾದ ಸೂಚನೆ ಮೇರೆಗೆ ಸಂಬಂಧಪಟ್ಟ ಬಂದರು ಕಛೇರಿಯ ಅಧಿಕಾರಿಗಳಿಂದ ತಂತಿಯ ಸೂಚಕ ನಿಶಾನೆಗಳನ್ನು ಸೂಚಕ ಕಂಬಗಳಲ್ಲಿ ಪ್ರದರ್ಶಿಸಲ್ಪಡಲಾಗುತ್ತಿದೆ. ಹಾಗೂ ಪ್ರತಿಕೂಲ ಹವಾಮಾನದ ಬಗ್ಗೆ ಸ್ಥಳೀಯ ಮೀನುಗಾರರಿಗೆ ಮತ್ತು ನಾವಿಕರಿಗೆ ನೋಟೀಸ್ ಮುಖಾಂತರ ಇಂತಹ ಸಮಯದಲ್ಲಿ ಸಮುದ್ರಕ್ಕೆ ತೆರಳಬಾರದೆಂದು ಸಹ ಸೂಚಿಸಲಾಗುತ್ತದೆ. ನೌಕಾನೆಲೆ ಗುರುತಿಸುವ ತೇಲು ಬುರುಡೆಗಳನ್ನು ಸಹ ಹಾಕಲಾಗುತ್ತಿದೆ.

ಇ) ಇಪ್ಪತ್ತೈದು ಜನರು ಸಾವಿಗೀಡಾಗಿದ್ದಾರೆ.

ವಿಷಯ:- ಬೆಂಗಳೂರಿನಲ್ಲಿರುವ ಟಿಪ್ಪು ಅರಮನೆ ಹಾಗೂ ಕೆ.ಆರ್. ಮಾರ್ಕೆಟ್ ಬಳಿಯಿರುವ ಕೋಟೆ ಕುರಿತು.

139(172)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬೆಂಗಳೂರಿನಲ್ಲಿರುವ ಟಿಪ್ಪು ಅರಮನೆ ಹಾಗೂ ಕೆ.ಆರ್. ಮಾರ್ಕೆಟ್ ಬಳಿಯಿರುವ ಕೋಟೆಯ ನಿರ್ವಹಣೆಯ ಹಾಗೂ ಹೊಣೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಒಳಪಟ್ಟಿದೆಯೇ;

ಆ) ಹಾಗಿದ್ದಲ್ಲಿ ಅದನ್ನು ಅಭಿವೃದ್ಧಿ ಪಡಿಸಲು ಕೈಗೊಳ್ಳಲುದ್ದೇಶಿಸಿರುವ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಬೆಂಗಳೂರಿನಲ್ಲಿರುವ ಟಿಪ್ಪು ಸುಲ್ತಾನ ಅರಮನೆ ಹಾಗೂ ಕೆ.ಆರ್. ಮಾರ್ಕೆಟ್ ಬಳಿಯಿರುವ ಕೋಟೆಯು ಕೇಂದ್ರ ಪುರಾತತ್ವ ಸರ್ವೇಕ್ಷಣಾಲಯದ ಸಂರಕ್ಷಣಾ ವ್ಯಾಪ್ತಿಯಲ್ಲಿರುತ್ತದೆ.

ಆ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ:- ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಿಗೆ ಆಯವ್ಯಯದಲ್ಲಿ ಮೀಸಲಿಟ್ಟ ಹಣ ಕುರಿತು.

140(55)

ಶ್ರೀ ಡಿ.ಆರ್. ಪಾಟೀಲ್ (ಗದಗ್):- ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-